

# ಜೇನು ಅಭ್ಯಾಗತ

ಸುತ್ತಮುತ್ತ ಕಾಡಿದ್ದರೂ ಮನೆಗೆ ಬಂದ ಜೇನ್ನೊಣಗಳು ನಮ್ಮ ಮನೆಯಲ್ಲೇ ತಮ್ಮ ಮನೆ ಎಂದುಕೊಂಡವು. ಜೇನ್ನೊಣಗಳ ಸಖ್ಯದಲ್ಲಿ ನಮ್ಮ ಬದುಕಿಗೆ ಹಲವು ಪಾಠಗಳಿವೆ.

■ ಸಹನಾ ಕಾಂತಬೈಲು

ಕೋಣೆ ತುಂಬ ಜೇನ್ನೊಣಗಳು ಹಾರಾಡುತ್ತಿದ್ದವು. ಸ್ವಲ್ಪ ಹೊತ್ತಿನಲ್ಲಿ ಅಲ್ಲಿಯೇ ಇರುವ ನನ್ನ ಹೊಲಿಗೆ ಮಿಶನ್ನಿನ ಅಡಿಭಾಗದ ಸರಳಿನಲ್ಲಿ ಗಡ್ಡದಾಕಾರದಲ್ಲಿ ಕುಳಿತುಕೊಂಡವು. ಬೋಳುಬೆಟ್ಟ ಅಡಿಮೇಲಾಗಿ ನೇತಾಡುತ್ತಿರುವಂತೆ ಕಾಣುತ್ತಿತ್ತು. ಭಯದಿಂದ ಕಂಪಿಸುತ್ತಿರುವ ಮಗನಿಗೆ ಹೇಳಿದೆ: 'ಹೆದರಬೇಡ, ಅವು ಏನೂ ಮಾಡುವುದಿಲ್ಲ. ಇವು ಪಾಪದ ಹುಳುಗಳು. ಕಡಿದರೂ ಇತರ ಜೇನುಹುಳು ಕಡಿದಷ್ಟು ಉರಿ ಇರುವುದಿಲ್ಲ. ಕೋಲ್ಜೇನು ಎಂದು ಇದಕ್ಕೆ ಹೆಸರು. ಆಯಾಸ ಪರಿಹರಿಸಲಿಕ್ಕೆಂದು ಕುಳಿತಿರಬಹುದು. ಒಂದೆರಡು ಗಂಟೆ ಇದ್ದು ಆಮೇಲೆ ಹಾರಿಹೋಗಬಹುದು'.

ಅವನಿಗೆ ತುಸು ಧೈರ್ಯ ಬಂತು. 'ಅಮ್ಮಾ, ಇದನ್ನು ಪೆಟ್ಟಿಗೆಯಲ್ಲಿಟ್ಟು ಸಾಕೋಣವೇ?' ಕೇಳಿದ.

'ಉಹುಂ, ಆಗಲ್ಲ. ಪೆಟ್ಟಿಗೆಯಲ್ಲಿಟ್ಟು ಸಾಕುವುದು ತುಡುವಿ ಜೇನು' ಉತ್ತರಿಸಿದೆ.

ಕೋಲ್ಜೇನು ಹೆಸರೇ ಸೂಚಿಸುವಂತೆ ಕೋಲುಗಳಿಗೆ ಅಡ್ಡವಾಗಿ ಗೂಡು ಕಟ್ಟುವ ಜೇನು ತಳಿ. ಗಾತ್ರದಲ್ಲಿ ಮನೆಯ ನೊಣಗಳಷ್ಟು ದೊಡ್ಡವು. ಪಶ್ಚಿಮ ಘಟ್ಟದ ಕಾಡುಗಳಲ್ಲಿ ಇವು ಕಂಡುಬರುತ್ತವೆ. ಇವುಗಳನ್ನು ಪೆಟ್ಟಿಗೆಯಲ್ಲಿಟ್ಟು ಸಾಕಲು ಆಗುವುದಿಲ್ಲ. ಇವು ಹೆಜ್ಜೇನು ಅಥವಾ ತುಡುವಿ ಜೇನು ಹುಳುಗಳಂತೆ ಅಪಾಯಕಾರಿಯಲ್ಲ. ಎಲ್ಲ ಜಾತಿಯ ಜೇನ್ನೊಣಗಳೂ ಕಟ್ಟಡದ ಗೋಡೆಗಳಲ್ಲಿ ಅಥವಾ ಮಾಡಿನ ಅಡ್ಡದಲ್ಲಿ ಗೂಡು ಕಟ್ಟಬಹುದೇ ಹೊರತು ಕಟ್ಟಡದ ಒಳಗೆ ಗೂಡು ಕಟ್ಟುವುದು ಅಪರೂಪ. ಮನೆಯೊಳಗೆ ಸಂಸಾರ ಹೂಡಿದ್ದನ್ನು ನಾನು ನೋಡಿದ್ದು ಇದೇ ಮೊದಲು.

ಕೋಲ್ಜೇನಿನಲ್ಲೂ ಎರಡು ಜಾತಿಯಿದೆ. ಮುಷ್ಠಿ ಗಾತ್ರದಲ್ಲಿ ಗೂಡು ಕಟ್ಟುವ ಜಾತಿ ಒಂದಾದರೆ, ಹಾಳೆಯಂತೆ ಅಗಲವಾಗಿ ಗೂಡು ಕಟ್ಟುವುದು ಇನ್ನೊಂದು. ನನ್ನ ಮನೆಯಲ್ಲಿ ಕೂತದ್ದು ಅಗಲವಾಗಿ ಗೂಡು ಕಟ್ಟುವ ತಳಿ. ಇದಕ್ಕೆ ಸ್ಥಳೀಯವಾಗಿ 'ಎಮ್ಮೆ ಕೋಲ್ಜೇನು' ಎಂದು ಕರೆಯುತ್ತಾರೆ. ಇದರಿಂದ ಅರ್ಧ ಕೇಜಿಯಷ್ಟು ಜೇನುತುಪ್ಪವನ್ನೂ ಪಡೆಯಬಹುದು.

ಈಗ ನನ್ನ ಮನೆಗೆ ಬಂದ ಜೇನ್ನೊಣಗಳ ಕತೆ ಹೇಳುತ್ತೇನೆ. ನಾನು ಯೋಚಿಸಿದ ಹಾಗೆ ಅವು ಹಾರಿ ಹೋಗಲಿಲ್ಲ. ಮರುದಿನ ಬೆಳಿಗ್ಗೆ ನಾನು ಮಾಡಿದ ಮೊದಲ ಕೆಲಸ ಜೇನುಹುಳುಗಳು ಏನು ಮಾಡುತ್ತವೆ ಎಂದು ಪರಿಶೀಲಿಸಿದ್ದು. ಸಾಮಾನ್ಯವಾಗಿ ಜೇನ್ನೊಣಗಳು ಸೂರ್ಯನ ಬೆಳಕು ಬಿದ್ದಾಕ್ಷಣ ತಮ್ಮ ಕೆಲಸ ಆರಂಭಿಸುತ್ತವೆ. ಆದರೆ ಈ ಹುಳುಗಳು ಬೆಳಗ್ಗೆ ಎಂಟು ಗಂಟೆಯಾದರೂ ಹೊರಹೋಗಲಿಲ್ಲ. ನಾನು ಕೆಲಸದ ಮಧ್ಯೆ ಆಗಾಗ ಬಿಡುವು ಮಾಡಿಕೊಂಡು ನೋಡತೊಡಗಿದೆ. ಹತ್ತು ಗಂಟೆಯಾಗುವಾಗ ಅಲ್ಲೇ ಸುತ್ತಮುತ್ತ ಕೆಲವು ಹುಳುಗಳು ಹಾರಾಡಲು ಶುರುಮಾಡಿದವು. ನಾಳೆ ಪರಿವಾರ ಸಮೇತ ಹೊರಟುಹೋಗಬಹುದು ಅಂದುಕೊಂಡೆ. ಆದರೆ ಮರುದಿನ ಸೂರ್ಯ ಮೂಡುವಾಗಲೇ ಆಹಾರ ತರುವ ಕೆಲಸಕ್ಕೆ ತೊಡಗಿದ್ದವು. ಮಗ ಕೋಣೆಯಲ್ಲಿ ಫ್ಯಾನ್ ಹಾಕಿದರೂ ಕ್ಯಾರೆ ಅನ್ನಲಿಲ್ಲ. ಮೊದಲು ಪುಟ್ಟದಿದ್ದ ಗೂಡು ಎರಡು ವಾರ ಕಳೆಯುವಷ್ಟರಲ್ಲಿ ಹುಣ್ಣಿಮೆ ಚಂದಿರನ ಆಕಾರ ಮತ್ತು ಗಾತ್ರ ತಳೆಯಿತು.

ಜೇನು ಹುಳುಗಳು ಬಂದು ಮೂರು ವಾರಗಳು ಕಳೆದವು. ಅವು ಪಟ್ಟಾಗಿ ಅಲ್ಲೇ ಕೂತಿವೆ. ಏನಾಶ್ಚರ್ಯ! ಆಗಲೇ ಜೇನು ಮಾಡಲು ಆರಂಭ ಮಾಡಿವೆ. ನಾನು ಗೂಡಿನ ಅಡಿಭಾಗದಿಂದ ಮೆಲ್ಲನೆ ಮುಟ್ಟಿದರೆ ಸುಖ ಅನುಭವಿಸುವಂತೆ ಸುಮ್ಮನೆ ಇರುತ್ತವೆ. ನನಗೂ ಏನೋ ಒಂದು ತೃಪ್ತಿಯ ಭಾವನೆ. ದಿನಕ್ಕೊಮ್ಮೆ ಅವುಗಳನ್ನು ಮುಟ್ಟಿ ಅವುಗಳ ಕ್ಷೇಮ ಸಮಾಚಾರ ವಿಚಾರಿಸಿಕೊಳ್ಳುವುದು ನನ್ನ ದಿನಚರಿಯ ಭಾಗವೇ ಆಗಿದೆ. ಹೊಲಿಗೆ ಮಿಶನ್ನಿನಲ್ಲಿ ಬಟ್ಟೆ ಹೊಲಿದರೂ, ಹೊಲಿಯುವಾಗ ಸದ್ದು ಹೊರಟರೂ ತನಗೇನೂ ಸಂಬಂಧವಿಲ್ಲದಂತೆ ಕೂತಿರುತ್ತವೆ. ರಾತ್ರಿ ಲೈಟ್ ಉರಿಸಿದರೂ ತೆಪ್ಪಗೆ ಇರುತ್ತವೆ. ಮಗ ನಿನ್ನೆ ಹೇಳಿದ, 'ನಾನು ರೂಮಲ್ಲಿ ಒಬ್ಬನೇ ಇರುವುದರಿಂದ ಅವು ನನ್ನ ಸಂಗಾತಕ್ಕೆ ಕೂತಿವೆ'.

ಇಂದು ಎಂದಿನಂತೆ ಅವುಗಳನ್ನು ಸ್ಪರ್ಶಿಸಲು ಹೊರಟೆ. ಒಂದು ನೊಣ ಹೆಬ್ಬೆರಳಿಗೆ ಕಡಿಯಿತು. ಇನ್ನೊಂದು ಕಿರು ಬೆರಳಿಗೆ. ಎಲಾ! ಇದೇನು ಈ ಹೊಸ ಪರಿ? ಎಂದು ಗೂಡನ್ನು ಪರಿಶೀಲಿಸಿದೆ. ಅವು ಮೊಟ್ಟೆ ಇಟ್ಟಿವೆ. ಯಃಕಶ್ಚಿತ್ ಕೀಟಗಳು ಕೂಡಾ ತಮ್ಮ ಮರಿಗಳನ್ನು ಹೀಗೆ ಕಾಪಿಡುತ್ತವೆ! ಬಂದಾಗ ಹಿಡಿಯಷ್ಟಿದ್ದ ಹುಳುಗಳ ಸಂಖ್ಯೆ ಈಗ ಒಂದು ಸೇರಿಗಿಂತ ಹೆಚ್ಚಾಗಿದೆ.

ಕಾಡಿನಲ್ಲಿ ನೆಲೆ ಇಲ್ಲದಿದ್ದರೆ ಕಾಡಿನ ಜೀವಿಗಳು ಮನೆಗೆ, ಊರಿಗೆ ಬರುವುದು ಸಹಜ. ನನ್ನ ಮನೆ ಸುತ್ತಮುತ್ತ ಬರೀ ಗಿಡಮರಗಳೇ ಇರುವುದು. ಹೀಗಿದ್ದೂ ಈ ಕೋಲ್ಜೇನು ನನ್ನ ಮನೆಯೊಳಗೆ ಯಾಕೆ ಸಂಸಾರ ಹೂಡಿತು? ಮಗುವಿನ ಕೈಗೂ ಸಿಗುವಷ್ಟು ಅಡಿಯಲ್ಲಿ ಗೂಡು ಕಟ್ಟಿದ ಈ ಹುಳುಗಳಿಗೆ ಮನುಷ್ಯರ ಹೆದರಿಕೆ ಏಕೆ ಬರಲಿಲ್ಲ? ಜೇನು ಹುಳುಗಳು ಮಾತ್ರ ನನ್ನ ಪ್ರಶ್ನೆಗಳ ಪರಿವೆಯಿಲ್ಲದೆ ಮಳೆಗಾಲಕ್ಕಾಗಿ ಆಹಾರ ಸಂಗ್ರಹಿಸುವ ಕಾರ್ಯದಲ್ಲಿ ಇನ್ನಿಲ್ಲದಂತೆ ತೊಡಗಿಕೊಂಡಿವೆ. ಕಿಟಕಿ ಮೂಲಕ ಒಳಗೆ ಬರುತ್ತವೆ; ಹೊರಗೆ ಹಾರುತ್ತವೆ. ನನ್ನ ಮನೆಯನ್ನು ತನ್ನದೇ ಮನೆ ಎಂದುಕೊಂಡಿವೆ.

ಪ್ರತಿಕ್ರಿಯಿಸಿ: feedback@sudha.co.in